ಕಥೆ



ಕೂತು, ತನ್ನೊಂದಿಗೆ ತಾನೇ ಮಾತಾಡುತ್ತಾ ಡೈರಿ ಬರೆಯುತ್ತಾಳೆ. ಸುಮ್ಮನೆ ಬರೆಯುತ್ತಾ ಹೋಗುತ್ತಾಳೆ. ನಿದ್ದೆ ಕೈ ಕೊಟ್ಟಿದೆ. ಹೊರಗಿನ ಚಂದಿರ ಕೈ ಬಿಟ್ಟು ನಡೆದಿದೆ. ಮಿಂಚುಹುಳಗಳು ತಮ್ಮ ಡ್ಯೂಟಿ ಮುಗಿಸಿ ಮನೆಗೆ ಹೋಗಿ ಎಷ್ಟೋ ಹೊತ್ತು ಕಳೆದಿದೆ. ಈಚೆಗೆ ಯಾಕೋ ಯಾವುದೂ ಸರಿಯಿಲ್ಲ ಅನಿಸುತ್ತಿದೆ. ಎದ್ದು ಹೋಗಿ ತನ್ನ ಖಾಸಗಿ ಡೈರಿ ಎತ್ತಿಕೊಂಡು ಬಂದು ಕೂತಳು. ಡೈರಿಯ ಪುಟಗಳು ತೆರೆದುಕೊಂಡವು. ಮನಸು ಬಿಚ್ಚಿಕೊಂಡಿತು.

ದಿನಾಂಕ: 16:02:2023 ಗುರುವಾರ. 12:15 ಎ.ಎಂ. ಕಾಲೇಜಿನಲ್ಲಿ ಒಬ್ಬ ಹುಡುಗಿಗೆ ಒಬ್ಬ ಹುಡುಗ ಜೊತೆಗಾರ. ಸುತ್ತಾಟ, ಜೀಕಾಟ ಎಲ್ಲವೂ ಇದೆ. ಕೆಲವು ಹುಡುಗಿಯರಿಗೆ ಇಬ್ಬರು, ಮೂವರು ಹುಡುಗರು; ಹುಡುಗರಿಗೂ ಅಷ್ಟೆ ಮೂರ್ನಾಲ್ಕು ಹುಡುಗಿಯರು. ನನಗೂ ಇದ್ದಾನೆ ಒಬ್ಬ. ಅದರ ನಡುವೆ ಅಪ್ಪ ಬಿಟ್ಟುಹೋದ ಹೆಸರು, ಅಮ್ಮನ ಒಳ್ಳೆಯತನ ಇದೆ; ಅದು ಅಡ್ಡವಾಗಿ. ನೀನು ಅಪ್ಪ ಇಲ್ಲದ ಮಗಳು. ನೀನು ಹೀಗೆಲ್ಲಾ ಮಾಡಬಹುದಾ? ನಿಮ್ಮಮ್ಮ ಎಷ್ಟು ಒಳ್ಳೆಯವರು ಅಂಥವರ ಹೊಟ್ಟೆಯಲ್ಲಿ ಇಂಥವರು ಹುಟ್ಟುತ್ತಾರಾ? 'ಹೀಗೆಲ್ಲಾ ಅಂದ್ರೆ ಹೇಗೆಲ್ಲಾ? ಒಳ್ಳೆಯವರಾಗಿದ್ದರೆ ಏನು ಸಿಗುತ್ತದೆ? ಈಗ ಅಮ್ಮನಿಗೆ ಏನು ಸಿಕ್ಕಿದೆ? ಜನ ಒಳ್ಳೆಯತನದ ಬಗ್ಗೆ ಮಾತಾಡಿಕೊಳ್ಳಬಹುದು. ಆದರೆ ಆ ಒಳ್ಳೆಯತನದ ಮಾತಿನಿಂದ ಅಮ್ಮನ ಕನಸಿನಲ್ಲಿ ಚಂದ್ರ ಮೂಡುತ್ತಾನಾ?

ನಾನು ಮದುವೆ ಮಾಡಿಕೊಳ್ಳಿ ಮಮ್ಮಿ ಅಂದ್ರೂ ಅಮ್ಮ ಮಾಡಿಕೊಳ್ಳಲಿಲ್ಲ. ನಾನು ಅಡ್ಡವಾದೆನಾ? ಇಲ್ಲದ ಅಪ್ಪ ಅಡ್ಡವಾದರಾ? ಅಪ್ಪನ ಒಳ್ಳೆಯ ಹೆಸರು ಅಡ್ಡವಾಯಿತಾ? ಇಲ್ಲದವರು ಹೀಗೆ ಅಡ್ಡವಾಗುವುದು ಯಾವ ನ್ಯಾಯ? ಆ ನನ್ನ ಹುಡುಗ ಎಷ್ಟು ಆತ್ಮೀಯನಾಗಿದ್ದಾನೆ. ಎಷ್ಟೊಂದು ಕಾಳಜಿ ಮಾಡುತ್ತಾನೆ. ಆದರೆ ಅದು ಒಳ್ಳೆಯದಾಗಲಾರದೆ? ಒಳ್ಳೆಯದು ಎಂಬುದಕ್ಕೆ ಕೆಲವು ಷರತ್ತುಗಳಿವೆಯೇ? ಅವತ್ತು ಕ್ಲಾಸು ರೂಮಿನಲ್ಲಿ ಯಾರೂ ಇಲ್ಲದನ್ನು ನೋಡಿ ಬಂದು ತಬ್ಬಿಯೆ ಬಿಟ್ಟಾ. ಅಪ್ಪನ ಒಳ್ಳೆಯದು, ಅಮ್ಮನ ಒಳ್ಳೆಯದಕ್ಕೆ ಕಲೆ ಮೆತ್ತಿಬಿಟ್ಟೆನಾ? ಗೊತ್ತಾಗದೆ ಉಳಿದದ್ದು ಎಲ್ಲವೂ ಒಳ್ಳೆಯದೆ ಆಗುತ್ತದಾ?

ಅವನು 'ಬಾರೇ ಎಲ್ಲಾದರೂ ಹೋಗಿ ಬರೋಣ' ಅಂತಾನೆ. ನನಗೂ ಆಸೆ ಇದೆ. ಈಗಷ್ಟೇ ಕರೆದ, ನನ್ನ ಉತ್ತರವಿಲ್ಲದಿದ್ದಕ್ಕೆ ಕೋಪ ಮಾಡಿಕೊಂಡು ಆಫ್‌ಲೈನ್ ಆದ. ಅವನು ಕರೆಯುವುದು ಸರಿ, ನಾನು ಹೋಗಬೇಕಾದದ್ದು ಸರಿ. ಆದರೆ ಅಡ್ಡವಾಗಿರುವ ಈ ಒಳ್ಳೆಯದು ಯಾಕೆ ಸರಿಯಾಗುವುದಿಲ್ಲ. ಸರಿ ಅನಿಸುವುದು ಯಾವುದೂ ಒಳ್ಳೆಯದಲ್ಲವಾ?

'ಆಯ್ತು ಕಣೋ ಡಿಯರ್ ಬರ್ತೀನಿ...' ಅಂತ ಟೈಪ್ ಮಾಡಿ ಉಳಿಸಿಕೊಂಡಿದ್ದನ್ನು ನಾನೇಕೆ ಕಳುಹಿಸಲಿಲ್ಲ? ನನಗೆ ಉತ್ತರವೇ ಹೊಳೆಯುತ್ತಿಲ್ಲ. ಮಗಳು ತುಂಬಾ ಒಳ್ಳೆಯವಳು ಎಂದು ಅಮ್ಮ ಯಾವತ್ತೂ ಹೇಳುತ್ತಾಳೆ. ಅದೇ ನನ್ನನ್ನು ತಡೆಯುತ್ತಿರಬಹುದಾ? ಅಪ್ಪ ಇಲ್ಲ ಅನ್ನುವುದು ತಡೆಯುತ್ತಿರಬಹುದು. ಅಮ್ಮನಿಗೆ ಖಂಡಿತ ತಿಳಿಯಬೇಕು ಮಗಳು ಒಳ್ಳೆಯವಳಲ್ಲ ಅನ್ನುವುದು. ಒಳ್ಳೆಯವರಂತೆ ನಟಿಸುವುದು ತುಂಬಾ ಕಷ್ಟ. ಬೇಗ ಸುಸ್ತಾಗಿ ಬಿಡುತ್ತದೆ.

ಸಾಕಾಗಿ ಬಿಟ್ಟಿದೆ. ನಾಳೆ ಅಮ್ಮನ ಎದುರಿಗೆ ನಿಲ್ಲಬೇಕು. ಕೇಳಬೇಕು 'ನೀನು ಒಳ್ಳೆಯವಳು ಸರಿ ಆದರೆ ನಾನು ಒಳ್ಳೆಯವಳಲ್ಲ. ಒಳ್ಳೆಯವರಿಗೆ ಏನೂ ಸಿಗುವುದಿಲ್ಲವಂತೆ. ನನಗೆ ಸಿಗಬೇಕು. ನನಗೆ ಅವನು ಬೇಕು. ಅದರಿಂದ ನಾನು ಒಳ್ಳೆಯವಳಾಗಿರಲು ಸಾಧ್ಯವಿಲ್ಲ, ಹೌದು ಖಂಡಿತ. ಅಮ್ಮನ ಎದುರಿಗೆ ಖಂಡಿತ ಈ ವಿಚಾರ ಮಾತಾಡಬೇಕು. ಒಂದು ನೀರವ ಮೌನ ಅವಳನ್ನು ಬಳಸುತ್ತದೆ. ಒಮ್ಮೆ ದೀರ್ಘವಾಗಿ ಉಸಿರಾಡಿ ಕಣ್ಮುಚ್ಚಿ ತೆಗೆಯುತ್ತಾಳೆ. ಅವಳ ಡೈರಿ ಬರಹ ಮುಗಿಯುತ್ತದೆ; ಹೊರಗೆ ಯಾವುದೊ ಮರದಲ್ಲಿ ಹಕ್ಕಿಯೊಂದು ಮತ್ತೆ ಮಗ್ಗಲು ಬದಲಿಸಿ ಮಲಗುತ್ತದೆ. ಡೈರಿ ಪುಟ ತುಂಬಲೊ ಎಂಬಂತೆ ಕಾದಿದ್ದ ಆ ಎರಡು ರೂಮಿನ ಮಿಣ ಮಿಣ ದೀಪಗಳು ಕಣ್ಮುಚ್ಚಿಕೊಳ್ಳುತ್ತವೆ. ಚೂರೇ ಚೂರು ಚಂದ್ರನ ಅರೆಬೆಳಕು ಚೆಲ್ಲುತ್ತದೆ. ಬೆತ್ತಲೆ ಗಾಳಿ ಬೀದಿ ತುಂಬಾ.

3

ಅವಳದೂ ಅಲ್ಲದ, ಇವಳದೂ ಅಲ್ಲದ ಆ ಮೂರನೆಯ ರೂಮಿನಲ್ಲಿ ಮಿಣ ಮಿಣ ಬೆಳಕಿಲ್ಲ. ಚಂದಿರನ ಬೆಳಕು ನುಗ್ಗಲು ಕಿಟಕಿ ತೆರೆದೂ ಇಲ್ಲ. ಅದು ಆ ಹೆಂಗಸಿನ ಗಂಡನ ರೂಮು, ಇವಳ ಈ ಹುಡುಗಿಯ ಅಪ್ಪನ ರೂಮು. ನೆಲದ ತುಂಬಾ ದೂಳು. ಅಲ್ಲಲ್ಲಿ ಜೇಡರ ಬಲೆಯ ಚಿತ್ತಾರ. ಅಲ್ಲೊಂದು ವರ್ಷಗಟ್ಟಲೆ ತೆಗೆಯದ ಅಲಮಾರು. ಅದರೊಳಗೆ ಒಂದು ಖಾಸಗಿ ಜಾಗದಲ್ಲಿ ಒಂದು ಪುಟ್ಟ ಡೈರಿ. ಇದುವರೆಗೂ ಯಾರ ಕಣ್ಣಿಗೂ ಬೀಳದ ಡೈರಿ. ಯಾರೂ ಓದದ ಡೈರಿ. ಎಂದೂ ತವಕಿಸದ ಆ ಡೈರಿ ಇಂದು ತಲ್ಲಣಿಸಿದೆ. ಈಗಷ್ಟೇ ಬರೆದ ಹೆಂಡತಿ, ಮಗಳ ಡೈರಿಯ ಪುಟಗಳಿಂದ ಜೀವ ಪಡೆದಂತೆ ಎದ್ದು ಕೂತಿದೆ. ಆ ಕತ್ತಲೆಯಲ್ಲಿ



ವಿಜಯ

## ಬೆಳದಿಂಗಳು

ಬೆಳದಿಂಗಳು
ಅಂಗಳದಿ ಚೆಲ್ಲಿದೆ
ಹಾಲಿನ ಹಾಗೆ
ಹಾಲು ಗಲ್ಲದ
ಮಗು ನಗುತಿರಲು
ಬೆಳದಿಂಗಳು
ಅವಳ ಅಂದ ನೋಡಿ
ನಾಚಿಕೊಂಡಿತು

—ವಿ. ಹೇಮಂತ ಕುಮಾರ್